**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 236 /2019**

ಚಾ.ಸಾ–1, ಪ್ರಾ.ಸಾ–04

| | | |
|---|---|---|
| ಹೆಸರು | : | ಸುಧಾ ರೊಟ್ಟಯ್ಯ |
| ಗಂಡನ ಹೆಸರು | : | ನಾಗೇಂದ್ರ |
| ವಯಸ್ಸು | : | 32 |
| ವೃತ್ತಿ | : | ಗ್ರಾಮ ಲೆಕ್ಕಿಗರು |
| ವಾಸ | : | ತಿ.ನರಸೀಪುರ |

**ದಿನಾಂಕ 12.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

ನನಗೆ ಮೃತ ನಾಗರಾಜು ಮತ್ತು ಚಾಸಾ 2 ಮತ್ತು 8 ರವರ ಪರಿಚಯವಿದೆ. ಆರೋಪಿಯನ್ನು ನೋಡಿರುತ್ತೇನೆ. ದಿಃ09.12.2018 ರಲ್ಲಿ ಮೈಸೂರಿನಲ್ಲಿ ಮದುವೆ ಮುಗಿಸಿ ಬರುತ್ತಿದ್ದಾಗ ಯಳವರಹುಂಡಿ ಹತ್ತಿರ ದರ್ಶನ ಫಾರಂ ಹೌಸ್ ಹತ್ತಿರ ನಮ್ಮ ಕಾರ್ ನ್ನು ಓಡಿಸುತ್ತಿದ್ದ ಮನುಕುಮಾರ್ ಎಂಬ ಚಾಲಕ ಕಾರ್ ನ್ನು ರೋಡ್ ಮಾಡುವ ರೋಲರ್ ಗೆ ಡಿಕ್ಕಿ ಪಡಿಸಿದರು. ನಾವು ಹೋಗುತ್ತಿದ್ದ ಕಾರ್ ನಂ.1197. ಅಪಘಾತ ಸುಮಾರು 2 ಗಂಟೆಗೆ ಆಗಿರುತ್ತದೆ. ನಾಗರಾಜಪ್ಪನಿಗೆ ತಲೆಗೆ ಏಟಾಗಿ ಸ್ಥಳದಲ್ಲಿ ಪ್ರಜ್ಞಾ ಹೀನರಾಗಿ ಬಿದ್ದರು ಆಸ್ಪತ್ರೆಗೆ ಹೋಗುವಾಗ ಅವರು ಮರಣ ಹೊಂದಿದ್ದರು. ನನಗೆ ಮತ್ತು ಚಾಸಾ 2 ರವರಿಗೆ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ. ನಂತರ ನಾನು ಪೋಲಿಸು

ದೂರು ನೀಡಿದೆ. ಈಗ ನಾನು ನೋಡುತ್ತಿರುವ ದೂರನ್ನು ನಾನೇ ಬರೆದುಕೊಟ್ಟಿದ್ದು ಅದನ್ನು ನಿಪಿ 2 ಎಂದು ಗುರುತಿಸಿ ಅದರಲ್ಲಿರುವ ಸಹಿಯನ್ನು 2 ಎ ಎಂದು ಗುರುತಿಸಲಾಯಿತು. ಕಾರ್ ನ್ನು ಚಲಾಯಿಸುತ್ತಿದ್ದ ಆರೋಪಿ ಅತಿವೇಗದಿಂದ ಚಾಲನೆ ಮಾಡಿದ್ದರಿಂದ ಅಪಘಾತವಾಗಿರುತ್ತದೆ. ಪೊಲೀಸರು ನನ್ನನ್ನು ದಿಃ 20.12.2018 ಕ್ಕೆ ಠಾಣೆಗೆ ಕರೆಸಿ ಚಾಲಕನನ್ನು ಗುರುತಿಸಲು ಕೇಳಿದ್ದು ನಾನು ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿರುತ್ತೇನೆ. ನಾನು ಕಾರಿನ ಪೋಟೋ ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ಅಪಘಾತ ಪಡಿಸಿದ ಕಾರಿನ ಪೋಟೋಗಳಾಗಿದ್ದು ಎರಡು ಪೋಟೋಗಳನ್ನು ನಿಪಿ 3 ಎಂದು ಹಾಗೂ ರೋಲರ್ ನ ಎರಡು ಪೋಟೋಗಳನ್ನು ನಿಪಿ 4 ಎಂದು ಗುರುತಿಸಲಾಯಿತು.

ಅಪಘಾತ ದಿನ ಪೊಲೀಸರು ನನ್ನನ್ನು ಅಪಘಾತವಾದ ಸ್ಥಳಕ್ಕೆ ಕರೆಯಿಸಿ ನಾನು ತೋರಿಸಿದ ಸ್ಥಳವನ್ನು ಸಂಜೆ 4.30 ರಿಂದ 5 ಗಂಟೆ ವೇಳೆಯಲ್ಲಿ ಇಬ್ಬರೂ ಪೊಲೀಸರು, ಸ್ವಲ್ಪ ಜನರು ಇದ್ದು ಅವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಸ್ಥಳದಿಂದ ಅಪಘಾತ ಪಡಿಸಿದ ಕಾರನ್ನು ಮತ್ತು ರೋಲರ್ ನ್ನು ಅಮಾನತು ಪಡಿಸಿ ಕೊಂಡಿರುತ್ತಾರೆ. ಈಗ ನಾನು ನೋಡುತ್ತಿರುವ ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಸಹಿಯನ್ನು 1 ಸಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಕೆ ಜಿ ಪಿ ಆರೋಪಿ ಪರ ವಕೀಲರಿಂದ**

ನಾನು ಮೃತ ನಾಗರಾಜಪ್ಪರವರ ಮನೆಯಲ್ಲಿ ಬಾಡಿಗೆಗೆ ಇರುತ್ತೇನೆಂದರೆ ಸರಿ. ನನಗೆ ಚಾಸಾ 2 ಮತ್ತು 8 ಚೆನ್ನಾಗಿ ಪರಿಚಯ ಎಂದರೆ ಸರಿ. ಅಪಘಾತ ಸ್ಥಳ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಪಘಾತ ಸಮಯದಲ್ಲಿ ರಸ್ತೆಯನ್ನು ರಿಪೇರಿ ಮಾಡುತ್ತಿದ್ದರು ಎಂದರೆ ಸರಿ. ರಸ್ತೆ ದುರಸ್ಥಿ ಮಾಡುತ್ತಿರುವುದರಿಂದ ಸಾಮಾನ್ಯವಾಗಿ ಎಲ್ಲಾ ವಾಹನಗಳು ನಿಧಾನಕ್ಕೆ ಚಲಿಸುತ್ತಿದ್ದವು ಎಂದರೆ ಸರಿ. ಮೈಸೂರು ಬಿಡುವಾಗ ಸುಮಾರು ಮಧ್ಯಹ್ನಾ 1.30 ಆಗಿತ್ತು. ನಾನು ಕಾರಿನ ಬಲಭಾಗದಲ್ಲಿ ಅಂದರೆ ಚಾಲಕನ ಹಿಂಭಾಗಕ್ಕೆ ಕುಳಿತಿದ್ದೆ. ನಾನು ಚಾಲಕನ ಹಿಂಭಾಗಕ್ಕೆ ಕುಳಿತಿದ್ದರಿಂದ ಕಾರಿನ ವೇಗ ಮತ್ತು ಮುಂದಿನ ವಾಹನಗಳ ಓಡಾಟ  ಗೊತ್ತಾಗುವುದಿಲ್ಲ ಎಂದರೆ ಸರಿ. ನಾವು ಹೋಗುತ್ತಿರುವ ಕಾರಿನ ಚಾಲಕ ಮೈಸೂರಿಗೆ ಹೋಗುವಾಗಿ ನಿಧಾನವಾಗಿ ಹೋಗಿದ್ದು ಬರುವಾಗ ವೇಗವಾಗಿ ಬಂದಿರುತ್ತಾನೆ.   ಕಾರಿನ ಚಾಲಕ ನನಗೆ ಪರಿಚಯವಿರಲ್ಲಿ ಎಂದರೆ ಸರಿ. ಯಳವರಹುಂಡಿಯ ಹತ್ತಿರ ಸುಮಾರು 1.45 ಗಂಟೆಗೆ ಅಪಘಾತವಾಗಿರುತ್ತದೆ. ರೋಡ್ ರೋಲರ್ ತಿ.ನರಸೀಪುರಕ್ಕೆ ಮುಖ ಮಾಡಿ ನಿಂತಿತ್ತು. ರೋಲರ್ ಗೆ ಟ್ರಾಲಿಯಂತಹ ವಾಹನ ಅಳವಡಿಸಿದ ಬಗ್ಗೆ ನನಗೆ ನೆನಪಿಲ್ಲ. ರೋಲರ್ ನ ನಂಬರ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ರಸ್ತೆ ರಿಪೇರಿ ಮಾಡಬೇಕಾದರೆ ಬ್ಯಾರಿಗೇಡ್ ಇಟ್ಟು ಕೆಲಸ ಮಾಡುತ್ತಾರೆ ಎಂದರೆ ಸರಿ. ರಸೆ ರಿಪೇರಿ ಕೆಲಸ ನಡೆಯುತಿದ್ದರಿಂದ ಆರೋಪಿ ಕಾರನ್ನು ನಿಧಾನವಾಗಿ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮೃತರ ಕುಂಟುಂಬಕ್ಕೆ

ಪರಿಹಾರ ಪಡೆಯಲು ಅನುಕೂಲವಾಗಲೆಂದು ಅವರ ಪರವಾಗಿ ಅವರ ಹೇಳಿಕೆಯಂತೆ ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿಃ 20.08.2018 ರಂದು ಠಾಣೆಯಲ್ಲಿ ಆರೋಪಿಯನ್ನು ಗುರುತಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರೋಡ್ ರೋಲರ್ ರಸ್ತೆ ಮೇಲೆ ನಿಂತಿತ್ತು ಎಂದರೆ ಸರಿ. ರೋಲರ್ ರಸ್ತೆ ಮೇಲೆ ನಿಂತಿದ್ದರಿಂದ ಕಾರಿನ ಚಾಲಕ ನಿಧಾನವಾಗಿ ಬರುತ್ತಿದ್ದರು ರೋಲರ್ ರಸ್ತೆ ಮೇಲೆ ಇರುವುದರಿಂದ ಅಪಘಾತವಾಗಿದೆ ಎಂದರೆ ಇರಬಹುದು. ಸ್ಥಳ ಮಹಜರ್ ಗಾಗಿ ನನಗೆ ಪೊಲೀಸರು ಲಿಖಿತ ನೋಟಿಸು ನೀಡಿರಲಿಲ್ಲ. ಸ್ಥಳ ಮಹರ್ ಸಮಯದಲ್ಲಿ ಸಾರ್ವಜನಿಕರಲ್ಲಿ ಯಾರಿದ್ದರು ಎಂದು ನನಗೆ ನೆನಪಿಲ್ಲ, ನಿಪಿ 1 ನ್ನು ಯಾರು ಬರೆದರು ನನಗೆ ನೆನಪಿಲ್ಲ. ಸ್ಥಳ ಮಹರ್ ನಲ್ಲಿ ಬರೆದ ಚೆಕ ಬಂದಿ ನನಗೆ ನೆನಪಿಲ್ಲ. ನಿಪಿ 1 ರ ದಿನ 1 ಕಾರ್ ಮತ್ತು 1 ರೋಲರ್ ನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಮಹಜರ್ ಗೆ ನಾನಲ್ಲದೆ ಇಬ್ಬರೂ ಪೊಲೀಸರು ಸಹಿ ಮಾಡಿರುತ್ತಾರೆ ಬೇರೆಯವರ ಸಹಿ ಪಡೆದ ಬಗ್ಗೆ ನನಗೆ ನೆನಪಿಲ್ಲ. ನಿಪಿ 1 ನ್ನು ಪೊಲೀಸರು ಠಾಣೆಯಲ್ಲಿ ಬರೆದಿದ್ದು ಠಾಣೆಯಲ್ಲಿ ಅದನ್ನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,
ತಿ.ನರಸೀಪುರ